# ತುಮಕೂರು ವೀರಶೈವ ಸಹಕಾರ ಬ್ಯಾಂಕ್ ನಿಯಮಿತ


ಆಡಳಿತ ಕಛೇರಿ :

ಡಾ॥ ಎಸ್. ರಾಧಕೃಷ್ಣನ್ ರಸ್ತೆ, ಎಸ್.ಎಸ್. ಪುರಂ, ತುಮಕೂರು - 572 102.

ದೂರವಾಣಿ : 0816-2254394, 2254027.

Email: tvcbank@gmail.com Web: www.tvcbltd.com


ಸ್ಥಾಪನೆ : 1978

# ಚುನಾವಣಾ ನೋಟೀಸ್

**ದಿನಾಂಕ : 29-12-2024 ನೇ ಭಾನುವಾರ**

**ಸಮಯ :**

**ಬೆಳಿಗ್ಗೆ 9.00 ಗಂಟೆಯಿಂದ ಮಧ್ಯಾಹ್ನ 4.00 ಗಂಟೆಯವರೆಗೆ**

**ಸ್ಥಳ : ಶ್ರೀ ಸಿದ್ಧಗಂಗಾ ಕಲಾ ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಕಾಲೇಜು, ಬಿ.ಹೆಚ್.ರಸ್ತೆ, ತುಮಕೂರು-572102**

ಅಂಚೆ ಪ್ರಮಾಣ ಪತ್ರ ಪಡೆದಿದೆ

ತೆರೆದ-ಅಂಚೆ

ಶ್ರೀಮತಿ/ಶ್ರೀ ______________________

______________________

______________________

# ತುಮಕೂರು ವೀರಶೈವ ಸಹಕಾರ ಬ್ಯಾಂಕ್ ನಿಯಮಿತ

ಆಡಳಿತ ಕಛೇರಿ :

ಡಾ॥ ಎಸ್. ರಾಧಕೃಷ್ಣನ್ ರಸ್ತೆ, ಎಸ್.ಎಸ್. ಪುರಂ, ತುಮಕೂರು - 572 102.

ದೂರವಾಣಿ : 0816-2254394, 2254027.

## ಚುನಾವಣಾ ನೋಟಿಸ್

ಮಾನ್ಯರೇ,

ನಮ್ಮ ಬ್ಯಾಂಕಿನ ಚುನಾವಣಾ ದಿನಾಂಕದಿಂದ ಮುಂದಿನ 5 ವರ್ಷಗಳ ಅವಧಿಗೆ ಆಡಳಿತ ಮಂಡಳಿ ಸದಸ್ಯರ ಆಯ್ಕೆಗಾಗಿ ದಿನಾಂಕ : 29-12-2024ನೇ ಭಾನುವಾರ ಬೆಳಿಗ್ಗೆ 9-00 ಗಂಟೆಯಿಂದ ಮಧ್ಯಾಹ್ನ 4-00 ಗಂಟೆಯವರೆಗೆ ಶ್ರೀ ಸಿದ್ಧಗಂಗಾ ಕಲಾ ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಕಾಲೇಜು, ಬಿ.ಹೆಚ್.ರಸ್ತೆ, ತುಮಕೂರು ಇಲ್ಲಿ ಚುನಾವಣೆ ನಡೆಸಲು ಏರ್ಪಡಿಸಲಾಗಿದೆ. ಮಾನ್ಯ ಸದಸ್ಯರೆಲ್ಲರೂ ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಿ ಮತದಾನ ಮಾಡಲು ಕೋರಲಾಗಿದೆ.

ರಿಟರ್ನಿಂಗ್ ಅಧಿಕಾರಿಗಳ ಚುನಾವಣಾ ವೇಳಾಪಟ್ಟಿಯನ್ನು ಸದಸ್ಯರುಗಳ ತಿಳುವಳಿಕೆಗಾಗಿ ಈ ಆಹ್ವಾನ ಪತ್ರಿಕೆಗೆ ಲಗತ್ತಿಸಿದೆ.

ದಿನಾಂಕ : 10-12-2024
ಸ್ಥಳ : ತುಮಕೂರು

ಕಲ್ಪನ ಜಿ.ಎಸ್.
ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

## -: ವಿಶೇಷ ಸೂಚನೆ :-

1. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 20(2) ಎ–IV ಮತ್ತು ಎ–V ರ ಪ್ರಕಾರ ಬ್ಯಾಂಕಿನ ಸದಸ್ಯನು ಹಿಂದಿನ ಐದು ವಾರ್ಷಿಕ ಸಾಮಾನ್ಯ ಸಭೆಗಳ ಪೈಕಿ ಯಾವುದೇ 2 ವಾರ್ಷಿಕ ಮಹಾಸಭೆಗಳಿಗೆ ಹಾಜರಾಗದಿದ್ದಲ್ಲಿ ಮತ್ತು ಯಾವುದೇ 2 ಸಹಕಾರ ವರ್ಷಗಳಲ್ಲಿ ಈ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದಂತೆ ಬ್ಯಾಂಕು ದೊರಕಿಸಿಕೊಡುವ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಪ್ರತಿವರ್ಷ ಬಳಸಿಕೊಳ್ಳಲು ತಪ್ಪಿದಲ್ಲಿ, ಅಂತಹ ಸದಸ್ಯನು ನಿರ್ದೇಶಕರ ಚುನಾವಣೆಯಲ್ಲಿ ಮತ ನೀಡುವ ಹಾಗೂ ಸ್ಪರ್ಧಿಸುವ ಹಕ್ಕನ್ನು ಹೊಂದಿರತಕ್ಕದ್ದಲ್ಲ.
2. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 20(ಎ-3) ರ ಅನ್ವಯ ಚುನಾವಣೆ ದಿನಾಂಕಕ್ಕೆ 12 ತಿಂಗಳ ಒಳಗಿನ ಅವಧಿಯಲ್ಲಿ ಸದಸ್ಯತ್ವ ಪಡೆದ ಸದಸ್ಯರು ಚುನಾವಣೆಯಲ್ಲಿ ಸ್ಪರ್ಧಿಸಲು ಮತ್ತು ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ.

# ತುಮಕೂರು ವೀರಶೈವ ಸಹಕಾರ ಬ್ಯಾಂಕ್ ನಿಯಮಿತ

**ಆಡಳಿತ ಕಛೇರಿ :**

**ಡಾ॥ ಎಸ್. ರಾಧಕೃಷ್ಣನ್ ರಸ್ತೆ, ಎಸ್.ಎಸ್. ಪುರಂ, ತುಮಕೂರು - 572 102.**

## ಚುನಾವಣಾ ನೋಟಿಸ್

ಸಹಕಾರ ಸಂಘಗಳ ಜಂಟಿ ನಿಬಂಧಕರು (ಪ್ರಭಾರ) ಹಾಗೂ ಚುನಾವಣಾಧಿಕಾರಿಗಳು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು-27 ಇವರ ಆದೇಶ ಸಂಖ್ಯೆ: ಸಚುಪ್ರಾ/ಬೆಂ.ಪ್ರಾ/ದಾ.ಜ/ರಿಆನೇ/19/2024-25 ದಿನಾಂಕ 05-10-2024 ರಂತೆ ತುಮಕೂರು ವೀರಶೈವ ಸಹಕಾರ ಬ್ಯಾಂಕ್ ನಿಯಮಿತ, ತುಮಕೂರು ಇದರ ದಿನಾಂಕ 29-12-2024 ರಿಂದ ಮುಂದಿನ 5 ವರ್ಷಗಳ ಅವಧಿಗೆ ಬ್ಯಾಂಕಿನ ಆಡಳಿತ ಮಂಡಲಿ ನಿರ್ದೇಶಕರುಗಳ ಆಯ್ಕೆಗಾಗಿ ಚುನಾವಣೆಯನ್ನು ನಡೆಸಲು ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ನಿಯಮ 13ಇ ಅಡಿಯಲ್ಲಿ ಮತ್ತು ಬ್ಯಾಂಕಿನ ಉಪವಿಧಿಗಳ ಪ್ರಕಾರ ಚುನಾವಣಾ ವೇಳಾಪಟ್ಟಿಯನ್ನು ಈ ಮೂಲಕ ಪ್ರಕಟಿಸಲಾಗಿದೆ.

ಚುನಾವಣಾ ದಿನಾಂಕ 29-12-2024, ಮತದಾನದ ಸಮಯ ಬೆಳಿಗ್ಗೆ 9-00 ಗಂಟೆಯಿಂದ ಮಧ್ಯಾಹ್ನ 4-00 ಗಂಟೆಯವರೆಗೆ, ಸ್ಥಳ ಶ್ರೀ ಸಿದ್ಧಗಂಗಾ ಕಲಾ ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಕಾಲೇಜು, ಬಿ.ಹೆಚ್.ರಸ್ತೆ, ತುಮಕೂರು ಇಲ್ಲಿ ಸಾಮಾನ್ಯ ಸ್ಥಾನಗಳಿಗೆ ಮತ್ತು ಮೀಸಲಿರಿಸಿದ ಮಹಿಳಾ ಸ್ಥಾನಗಳಿಗೆ ಚುನಾವಣೆ ನಡೆಸಲಾಗುವುದೆಂದು ನೋಟಿಸ್ ನೀಡಲಾಗಿದೆ.

## ಚುನಾವಣಾ ವೇಳಾಪಟ್ಟಿ ಈ ಕೆಳಕಂಡಂತೆ ಪ್ರಕಟಿಸಲಾಗಿದೆ

| ಕ್ರ. ಸಂ. | ಚುನಾವಣಾ ಕಾರ್ಯಸೂಚಿ | ದಿನಾಂಕ, ವಾರ ಮತ್ತು ಸಮಯ | ವಿವರ ಮತ್ತು ಸ್ಥಳ |
|---|---|---|---|
| 1. | ಸ್ಪರ್ಧಿಸಲು ಇಚ್ಛಿಸುವಂತಹ ಅಭ್ಯರ್ಥಿಗಳು ನಾಮಪತ್ರವನ್ನು ಸಲ್ಲಿಸಲು ಪ್ರಾರಂಭದ ದಿನಾಂಕ | ದಿನಾಂಕ 15-12-2024 ಭಾನುವಾರ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 3.00 ಗಂಟೆಯವರೆಗೆ | ಬ್ಯಾಂಕಿನ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಯವರಿಗೆ ನಮೂನೆ xiii ರಲ್ಲಿ |
| 2. | ಸ್ಪರ್ಧಿಸಲು ಇಚ್ಛಿಸುವಂತಹ ಅಭ್ಯರ್ಥಿಗಳು ನಾಮಪತ್ರವನ್ನು ಸಲ್ಲಿಸಲು ಕೊನೆಯ ದಿನಾಂಕ (ನಿಯಮ 14-ಎ) | ದಿನಾಂಕ 21-12-2024 ಶನಿವಾರ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 3.00 ಗಂಟೆಯವರೆಗೆ | ಬ್ಯಾಂಕಿನ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಯವರಿಗೆ ನಮೂನೆ xiii ರಲ್ಲಿ |
| 3. | ರಿಟರ್ನಿಂಗ್ ಅಧಿಕಾರಿಯಿಂದ ನಾಮಪತ್ರಗಳ ಪರಿಶೀಲನೆ (ನಿಯಮ 14-ಬಿ) | ದಿನಾಂಕ 22-12-2024 ಭಾನುವಾರ ಬೆಳಿಗ್ಗೆ 11.00 ರಿಂದ ನಾಮಪತ್ರ ಪರಿಶೀಲನೆ ಮುಗಿಯುವವರೆಗೆ | ಬ್ಯಾಂಕಿನ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಯಿಂದ |

| | | | |
|---|---|---|---|
| 4. | ರಿಟರ್ನಿಂಗ್ ಅಧಿಕಾರಿಯಿಂದ ಸಿಂಧುತ್ವ ಹೊಂದಿರುವ ನಾಮನಿರ್ದೇಶಿತ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ (ನಿಯಮ 14-ಬಿ(4)) | ನಾಮಪತ್ರಗಳ ಪರಿಶೀಲನೆ ನಂತರ ದಿನಾಂಕ 22-12-2024 ಭಾನುವಾರ | ಬ್ಯಾಂಕಿನ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಯಿಂದ ನಮೂನೆ xiv ರಲ್ಲಿ |
| 5. | ಉಮೇದುವಾರರಿಂದ ನಾಮಪತ್ರವನ್ನು ಹಿಂಪಡೆಯಲು ಕಡೆಯ ದಿನಾಂಕ (ನಿಯಮ 14-ಸಿ) | ದಿನಾಂಕ 23-12-2024 ಸೋಮವಾರ ಮಧ್ಯಾಹ್ನ 3.00 ಗಂಟೆಯವರೆಗೆ | ಬ್ಯಾಂಕಿನ ಕಛೇರಿಯಲ್ಲಿ ರಿಟರ್ನಿಂಗ್ ಅಧಿಕಾರಿಯವರಿಗೆ ನಮೂನೆ XV ರಲ್ಲಿ |
| 6. | ರಿಟರ್ನಿಂಗ್ ಅಧಿಕಾರಿಯಿಂದ ಸಿಂಧುತ್ವ ಹೊಂದಿರುವ ಉಮೇದುವಾರರ ಪಟ್ಟಿಯ ಪ್ರಕಟಣೆ (ನಿಯಮ 14-ಡಿ) | ದಿನಾಂಕ 23-12-2024 ಸೋಮವಾರ ಮಧ್ಯಾಹ್ನ 3.00 ಗಂಟೆಯ ನಂತರ | ಬ್ಯಾಂಕಿನ ಕಛೇರಿಯ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಯಿಂದ |
| 7. | ಅವಶ್ಯಕವಿದ್ದಲ್ಲಿ ರಿಟರ್ನಿಂಗ್ ಅಧಿಕಾರಿಯಿಂದ ಅಭ್ಯರ್ಥಿಗಳಿಗೆ ಚಿಹ್ನೆಗಳ ಹಂಚಿಕೆ (ನಿಯಮ 14-ಇ) | ದಿನಾಂಕ 23-12-2024 ಸೋಮವಾರ ಮಧ್ಯಾಹ್ನ 3.00 ಗಂಟೆಯ ನಂತರ | ಬ್ಯಾಂಕಿನ ಕಛೇರಿಯ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಯಿಂದ |
| 8. | ಸಿಂಧುತ್ವ ಹೊಂದಿರುವ ಉಮೇದುವಾರರ ಪಟ್ಟಿ ಚಿಹ್ನೆಯೊಂದಿಗೆ ಪ್ರಕಟಣೆ (ನಿಯಮ 14-ಡಿ ಮತ್ತು 14-ಇ) (ಮಾದರಿ ಮತಪತ್ರ) | ದಿನಾಂಕ 24-12-2024 ಮಂಗಳವಾರ ಬೆಳಿಗ್ಗೆ 11.00 ಗಂಟೆಯ ನಂತರ | ಬ್ಯಾಂಕಿನ ಕಛೇರಿಯ ಸೂಚನಾ ಫಲಕದಲ್ಲಿ ರಿಟರ್ನಿಂಗ್ ಅಧಿಕಾರಿಯಿಂದ |
| 9. | ಮತದಾನದ ದಿನಾಂಕ ಮತ್ತು ಸಮಯ | ದಿನಾಂಕ 29-12-2024 ಭಾನುವಾರ ಬೆಳಿಗ್ಗೆ 9.00 ರಿಂದ ಸಂಜೆ 4.00 ಗಂಟೆಯವರೆಗೆ | ಶ್ರೀ ಸಿದ್ಧಗಂಗಾ ಕಲಾ ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಕಾಲೇಜು, ಬಿ.ಹೆಚ್.ರಸ್ತೆ, ತುಮಕೂರು |
| 10. | ಮತ ಎಣಿಕೆಯ ದಿನಾಂಕ ಮತ್ತು ಸಮಯ | ದಿನಾಂಕ 29-12-2024 ಭಾನುವಾರ ಮತದಾನ ಮುಗಿದ ನಂತರ | ಶ್ರೀ ಸಿದ್ಧಗಂಗಾ ಕಲಾ ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಕಾಲೇಜು, ಬಿ.ಹೆಚ್.ರಸ್ತೆ, ತುಮಕೂರು |
| 11. | ರಿಟರ್ನಿಂಗ್ ಅಧಿಕಾರಿಯಿಂದ ಚುನಾವಣಾ ಫಲಿತಾಂಶ ಘೋಷಣೆ | ದಿನಾಂಕ 29-12-2024 ಭಾನುವಾರ ಮತ ಎಣಿಕೆ ಮುಗಿದ ನಂತರ | ಶ್ರೀ ಸಿದ್ಧಗಂಗಾ ಕಲಾ ವಿಜ್ಞಾನ ಮತ್ತು ವಾಣಿಜ್ಯ ಮಹಿಳಾ ಕಾಲೇಜು, ಬಿ.ಹೆಚ್.ರಸ್ತೆ, ತುಮಕೂರು ಹಾಗೂ ಬ್ಯಾಂಕಿನ ಸೂಚನಾ ಫಲಕದಲ್ಲಿ |

## ವಿಶೇಷ ಸೂಚನೆಗಳು

1. ಬ್ಯಾಂಕಿನ ಬೈಲಾಸಂಖ್ಯೆ 46/1 ರ ಪ್ರಕಾರ ಆಡಳಿತ ಮಂಡಳಿಯ 19 ನಿರ್ದೇಶಕರ ಆಯ್ಕೆಗಾಗಿ ಚುನಾವಣೆ ನಡೆಯಲಿದ್ದು ಈ ಪೈಕಿ 2 ಸ್ಥಾನ ಮಹಿಳೆಯರಿಗೆ ಮೀಸಲಾಗಿರುತ್ತದೆ.
2. ಮೀಸಲು ಸ್ಥಾನಕ್ಕೆ ಸ್ಪರ್ಧಿಸುವ ಉಮೇದುವಾರರು ಉಮೇದುವಾರಿಕೆ/ ನಾಮಪತ್ರದಲ್ಲಿ ಮೀಸಲು ಸ್ಥಾನದ ಹೆಸರನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.
3. ಕರ್ನಾಟಕ ಸಹಕಾರ ಸಂಘಗಳ ನಿಯಮ 14ಎ ರೀತ್ಯಾ ಉಮೇದುವಾರರು ಯಾವುದಾದರೂ ಒಂದು ಸ್ಥಾನಕ್ಕೆ ಮಾತ್ರ ಸ್ಪರ್ಧಿಸಬಹುದು ಹಾಗೂ ನಾಮಪತ್ರಕ್ಕೆ ಅಂತಿಮ ಅರ್ಹ ಮತದಾರರ ಪಟ್ಟಿಯಲ್ಲಿರುವ ಒಬ್ಬ ಸದಸ್ಯ ಒಬ್ಬ ಉಮೇದುವಾರರಿಗೆ ಮಾತ್ರ ಸೂಚಿಸತಕ್ಕದ್ದು. (ಸೂಚಕರಾಗಿ ಒಬ್ಬರಿಗಿಂತ ಹೆಚ್ಚಿನ ಅಭ್ಯರ್ಥಿಗಳು ಸೂಚಿಸತಕ್ಕದಲ್ಲ)
4. ನಾಮಪತ್ರವನ್ನು ಸಲ್ಲಿಸುವಾಗ ಚುನಾವಣಾ ಠೇವಣಿ ಬಾಬ್ತು ರೂ. 2000.00 ಗಳನ್ನು ಬ್ಯಾಂಕಿಗೆ ನಗದಾಗಿ ಪಾವತಿಸಿ ರಸೀತಿ ಪಡೆಯತಕ್ಕದ್ದು. ಮಹಿಳಾ ಸ್ಥಾನಗಳಿಗೆ ಸ್ಪರ್ಧಿಸುವ ಸದಸ್ಯರಿಗೆ ಶೇ.50 ರಷ್ಟು ವಿನಾಯಿತಿ ಇರುತ್ತದೆ.
5. ಕರ್ನಾಟಕ ಸಹಕಾರ ಸಂಘಗಳ ನಿಯಮ 14ಎಇ ರೀತ್ಯಾ ಹಾಗೂ ನಿಯಮ 14ಎಇ(4) ರೀತ್ಯಾ ಸ್ಪರ್ಧಿಸಿದ ಅಭ್ಯರ್ಥಿಯು ಚುನಾಯಿತನಾಗದಿದ್ದರೆ, ಚುನಾವಣೆಯಲ್ಲಿ ಎಲ್ಲಾ ಅಭ್ಯರ್ಥಿಗಳು ಪಡೆದ ಕ್ರಮಬದ್ಧ ಮತಗಳ ಒಟ್ಟು ಸಂಖ್ಯೆಯನ್ನು ಚುನಾಯಿಸಬೇಕಾದ ಸದಸ್ಯರ ಸಂಖ್ಯೆಯಿಂದ ಭಾಗಿಸಿದಾಗ ಬರುವಷ್ಟರ ಸಂಖ್ಯೆಯು ಆರನೇ ಒಂದರಷ್ಟು ಕ್ರಮಬದ್ಧ ಮತಗಳನ್ನು ಪಡೆಯದಿದ್ದಲ್ಲಿ ಹಾಗೂ ಮೀಸಲು ಸ್ಥಾನಕ್ಕೆ ಸ್ಪರ್ಧಿಸಿರುವ ಅಭ್ಯರ್ಥಿಗಳು ಪಡೆದ ಕ್ರಮಬದ್ಧ ಮತಗಳ ಒಟ್ಟು ಸಂಖ್ಯೆಯ ಹತ್ತನೇ ಒಂದಕ್ಕಿಂತ ಕಡಿಮೆ ಇದ್ದಲ್ಲಿ ಠೇವಣಿ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.
6. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದ ಪ್ರಕರಣ, ಮತ್ತು ನಿಯಮ ಹಾಗೂ ಬೈಲಾ ಪ್ರಕಾರ ನಿರ್ದೇಶಕ ಮಂಡಲಿಗೆ ಆಯ್ಕೆಯಾಗಲು ಇರಬೇಕಾದ ಅರ್ಹತೆ/ಅನರ್ಹತೆಗಳು ಈ ಕೆಳಕಂಡಂತೆ ಇರುತ್ತದೆ.

ಅ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 16 ಮತ್ತು 17ರನ್ವಯ ಅನರ್ಹರಾಗಿ ಸಂಬಂಧಪಟ್ಟ ಪ್ರಾಧಿಕಾರದಿಂದ ಆದೇಶವಾಗಿದ್ದಲ್ಲಿ.

ಆ. ಸಹಕಾರ ಬ್ಯಾಂಕಿನಿಂದ ಸಾಲ ಪಡೆದು ಸುಸ್ತಿದಾರರಾಗಿರಕೂಡದು.

ಇ. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 29ಸಿ ಅನ್ವಯ ಈ ಅವಧಿಯಲ್ಲಿ ಅನರ್ಹತೆ ಹೊಂದಿರತಕ್ಕದ್ದಲ್ಲ.

7. ನಾಮಪತ್ರಗಳ ಪರಿಶೀಲನೆ ವೇಳೆ ಅಭ್ಯರ್ಥಿಗಳು ಅಥವಾ ಸೂಚಕರು ಹಾಜರಿರಬಹುದು.

8. ನಾಮಪತ್ರದ ನಮೂನೆಗಳನ್ನು ಬ್ಯಾಂಕಿನ ವೇಳೆಯಲ್ಲಿ ಬ್ಯಾಂಕಿನ ಆಡಳಿತ ಕಛೇರಿಯಲ್ಲಿ ಪಡೆಯತಕ್ಕದ್ದು.

9. ಉಮೇದುವಾರಿಕೆ ವಾಪಸ್ಸಾತಿಗೆ ಅರ್ಜಿಯನ್ನು ನಿಗಧಿತ ನಮೂನೆಯಲ್ಲಿ ಖುದ್ದು ಅಭ್ಯರ್ಥಿ ನೀಡತಕ್ಕದ್ದು.

10. ರಾಷ್ಟ್ರ ಮತ್ತು ರಾಜ್ಯ ರಾಜಕೀಯ ಚಿಹ್ನೆ ಹೊರತುಪಡಿಸಿ ಮುಕ್ತ ಚುನಾವಣಾ ಚಿಹ್ನೆಗಳನ್ನು ಬ್ಯಾಂಕಿನ ಸೂಚನಾಫಲಕದಲ್ಲಿ ಪ್ರಕಟಿಸಲಾಗಿದೆ.

11. ಅಂತಿಮ/ಅರ್ಹ ಮತದಾರರ ಪಟ್ಟಿಯನ್ನು ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳಿಂದ ಬ್ಯಾಂಕಿನವರು ನಿಗಧಿಪಡಿಸಿರುವ ಶುಲ್ಕವನ್ನು ಪಾವತಿಸಿ ಸದಸ್ಯರು ಪಡೆಯಬಹುದಾಗಿದೆ.

12. ಮತ ಚಲಾಯಿಸುವ ಅರ್ಹ ಸದಸ್ಯರು ಬ್ಯಾಂಕಿನಿಂದ ಪಡೆದ ಭಾವಚಿತ್ರವಿರುವ ಗುರುತಿನ ಚೀಟಿಯನ್ನು ಮತದಾನ ನಡೆಯುವ ಸ್ಥಳದಲ್ಲಿ ಹಾಜರುಪಡಿಸಬೇಕು. ಬ್ಯಾಂಕಿನ ಗುರುತಿನ ಚೀಟಿ ಕಡ್ಡಾಯಗೊಳಿಸಿರುವುದರಿಂದ ಅರ್ಹ ಸದಸ್ಯರು ಭಾವಚಿತ್ರವಿರುವ ಗುರುತಿನ ಚೀಟಿಯನ್ನು ಪಡೆದು ಮತದಾನ ಮಾಡುವುದು ಅವರ ವೈಯಕ್ತಿಕ ಜವಾಬ್ದಾರಿಯಾಗಿರುತ್ತದೆ.

13. ಆಯ್ಕೆಯಾಗಬೇಕಾದ ಅಭ್ಯರ್ಥಿಗಳಿಗಿಂತ ಹೆಚ್ಚಿನ ಅಭ್ಯರ್ಥಿಗಳು ಸ್ಪರ್ಧಿಸಿದ್ದಲ್ಲಿ ವೇಳಾಪಟ್ಟಿಯಂತೆ ಚುನಾವಣೆ ನಡೆಸಲಾಗುವುದು.

14. ಚುನಾವಣೆ ಸಂಬಂಧವಾಗಿ ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ ದಿನಾಂಕದಿಂದ ಚುನಾವಣೆ ಮುಗಿಯುವವರೆಗೂ ಸಾರ್ವಜನಿಕ ರಜೆ ದಿನಗಳಲ್ಲೂ ಸಹ ಚುನಾವಣಾ ವೇಳಾಪಟ್ಟಿಯಂತೆ ಕಾರ್ಯಕ್ರಮಗಳು ನಡೆಯುತ್ತವೆ.

**ಹೆಚ್. ಓಬಳೇಶ**
**ರಿಟರ್ನಿಂಗ್ ಅಧಿಕಾರಿ**
**ತುಮಕೂರು ವೀರಶೈವ ಸಹಕಾರ ಬ್ಯಾಂಕ್ ನಿ., ತುಮಕೂರು**
**ಹಾಗೂ**
**ಸಹಕಾರ ಸಂಘಗಳ ಸಹಾಯಕ ನಿಬಂಧಕರು,**
**ತುಮಕೂರು ಉಪವಿಭಾಗ, ತುಮಕೂರು.**

**ಸ್ಥಳ : ತುಮಕೂರು**

**ದಿನಾಂಕ : 10-12-2024**